ವಿಕಸಿಸುವ ಶಕ್ತಿ ಅದಕ್ಕಿದೆ. ಈ ಬೀಜಕ್ಕೆ ಶಕ್ತಿ ನೀಡುವ ಗೊಬ್ಬರ ಎಷ್ಟೇ ಶ್ರೇಷ್ಠವಾದರೂ ಅದು ಗೊಬ್ಬರವೆ, ಅದಕ್ಕೆ ಜೀವ ಇಲ್ಲ. ಬೀಜಕ್ಕೆ ಇರುವ ಶಕ್ತಿ ಗೊಬ್ಬರಕ್ಕೆ ಇರುವುದಿಲ್ಲ. ಮಾಹಿತಿಯೂ ಹೀಗೆಯೇ, ಗೊಬ್ಬರಕ್ಕೆ ಸಮಾನ. ಆದರೆ ಇಂದಿನ ಶಿಕ್ಷಣವು ಬೀಜಕ್ಕಿಂತ ಗೊಬ್ಬರಕ್ಕೇ ಹೆಚ್ಚು ಪ್ರಾಧಾನ್ಯತೆ ನೀಡುತ್ತಿದೆ; ಗೊಬ್ಬರವೇ ಸರ್ವಶ್ರೇಷ್ಠವೆಂಬಂತೆ ವರ್ತಿಸುತ್ತಿದೆ. ಈ ತಪ್ಪುಕಲ್ಪನೆ ಬದಲಾಗುವವರೆಗೆ ಶಿಕ್ಷಣದಲ್ಲಿ ನಿಜವಾದ ಕ್ರಾಂತಿ ಅಸಾಧ್ಯ.

ಇಂದಿನ ಬಹಳಷ್ಟು ಪತ್ರಿಕೆಗಳಲ್ಲಿ, ನಿಯತಕಾಲಿಕಗಳಲ್ಲಿ ಮಕ್ಕಳ ಮೇಲೆ ಪೋಷಕರ ಒತ್ತಡವನ್ನು ಕುರಿತು ಲೇಖನಗಳು ಪ್ರಕಟವಾಗುತ್ತಿವೆ. ಮಕ್ಕಳನ್ನು ಸದಾಕಾಲ, "ಹೋಂವರ್ಕ್ ಮಾಡು, ಓದು" ಎಂದು ಒತ್ತಡ ಹೇರುವ ಪೋಷಕರು ಮಕ್ಕಳ ಹಿತಚಿಂತನೆಗಿಂತಲೂ, ಮಕ್ಕಳ ಅಭಿವೃದ್ಧಿಯ ಮೂಲಕ ತಮಗಾಗುವ ಅನುಕೂಲಗಳ ಕುರಿತೇ ಹೆಚ್ಚು ಆಸಕ್ತರಾಗಿರುವಂತೆ ತೋರುತ್ತದೆ. ಆದರೆ ಸ್ವಾಮೀಜಿಯವರು ೧೨೦ ವರ್ಷಗಳ ಹಿಂದೆಯೇ ನಮ್ಮ ಪೋಷಕರನ್ನು ಇದರ ಬಗ್ಗೆ ಎಚ್ಚರಿಸಿದ್ದರು. ಅವರು ಹೇಳುತ್ತಾರೆ, "ಪೋಷಕರ ಅತಿಯಾದ ಒತ್ತಡದಿಂದಾಗಿ ನಮ್ಮ ಹುಡುಗರಿಗೆ ಸ್ವತಂತ್ರವಾಗಿ ಬೆಳೆಯಲು ಅವಕಾಶವೇ ದೊರೆಯುತ್ತಿಲ್ಲ. ನೀವು ಒಬ್ಬನಿಗೆ ಸಿಂಹವಾಗಲು ಅವಕಾಶ ಕೊಡದಿದ್ದರೆ ಅವನು ನರಿಯಾಗುತ್ತಾನೆ ಅಷ್ಟೆ." ಮುಂದುವರೆದು ಹೇಳುತ್ತಾರೆ, "ಶ್ರೀರಾಮಕೃಷ್ಣರು ಎಂತಹ ಮನುಷ್ಯನಿಗೂ ಪ್ರೋತ್ಸಾಹ ನೀಡುತ್ತಿದ್ದರು. ಹಾಗಾಗಿ ಆ ಮನುಷ್ಯನ ಜೀವನವೇ ಬದಲಾಗುತ್ತಿತ್ತು; ಅವರು ಎಂದೂ ಮತ್ತೊಬ್ಬರಲ್ಲಿರುವ ವಿಶೇಷ ಗುಣಗಳನ್ನು ನಾಶ ಮಾಡುತ್ತಿರಲಿಲ್ಲ. ಅತ್ಯಂತ ಅಧಮನಿಗೂ ಸಹ ಅವರು ಧೈರ್ಯ ತುಂಬಿ ಪ್ರೋತ್ಸಾಹ ನೀಡುತ್ತ ಮೇಲಕ್ಕೆತ್ತುತ್ತಿದ್ದರು."

ಸ್ವಾಮೀಜಿಯವರ ಇಡೀ ಜೀವನದ ಸಂದೇಶ ಏನೆಂದರೆ, 'ಸಕಾರಾತ್ಮಕ ಜೀವನದೃಷ್ಟಿ'. ಅವರು ಎಲ್ಲ ಸಂದರ್ಭಗಳಲ್ಲೂ ಧೈರ್ಯ ಮತ್ತು ಸಕಾರಾತ್ಮಕ ದೃಷ್ಟಿಗಳನ್ನು ಒತ್ತಿ ಹೇಳುತ್ತಿದ್ದರು. ಅವರು ಹೇಳುತ್ತಾರೆ, "ನಾವು ಸಾರ್ವಜನಿಕರಿಗೆ ಸದಾಕಾಲವೂ ಸಕಾರಾತ್ಮಕ ಸಂದೇಶಗಳನ್ನು ಕೊಡಬೇಕು. ಪದೇ ಪದೇ ನಕಾರಾತ್ಮಕ ಸಂದೇಶಗಳನ್ನು ಕೊಟ್ಟರೆ ಅವರು ದುರ್ಬಲರಾಗುತ್ತಾರೆ." ಮುಂದುವರಿದು ಅವರು ಹೇಳುತ್ತಾರೆ, "ಯಾವ ತಂದೆತಾಯಿಯರು ತಮ್ಮ ಮಕ್ಕಳನ್ನು ಮೂರ್ಖರು ಎಂದು ಕರೆಯುತ್ತ, ಸದಾಕಾಲವೂ 'ಓದು ಓದು' ಎಂದು ಪೀಡಿಸುತ್ತಾರೋ, ಅಂಥವರ ಮಕ್ಕಳು ಶತಮೂರ್ಖರಾಗಿ ಪರಿಣಮಿಸುತ್ತಾರೆ. ನೀವು ಈ ಹುಡುಗರನ್ನು ಪ್ರೀತಿಯಿಂದ ಮಾತನಾಡಿಸುತ್ತ ಅವರಿಗೆ ಧೈರ್ಯ ತುಂಬಿದರೆ, ಅವರೂ ಸಹ ಮುಂದೆ ಬರುತ್ತಾರೆ. ಸಾಹಿತ್ಯ, ಕಲೆ ಅಥವಾ ಕಾವ್ಯ – ಯಾವುದೇ ಆಗಲಿ, ಜನಗಳು ಮಾಡುವ ತಪ್ಪನ್ನೇ ಪದೇ ಪದೇ ಹೇಳುತ್ತ, ಅವರನ್ನು ಹೀಯಾಳಿಸುವ ಬದಲು ಅವರಿಗೆ ಸಕಾರಾತ್ಮಕ ವಿಚಾರಗಳನ್ನು ಕೊಡುತ್ತ ಉತ್ತೇಜನ ನೀಡಿದರೆ ಅವರೆಲ್ಲಾ ಪ್ರಗತಿ ಸಾಧಿಸುತ್ತಾರೆ."

ಒಟ್ಟಿನಲ್ಲಿ ಸ್ವಾಮೀಜಿಯವರ ಸಂದೇಶವೇನೆಂದರೆ, ಹೇಗೋ ಮಾಡಿ ನಾವು ಸಕಾರಾತ್ಮಕ ಜೀವನದೃಷ್ಟಿಯನ್ನು ಬೆಳೆಸಿಕೊಳ್ಳುತ್ತ, ಜೊತೆಗೆ ಇತರರಿಗೂ ಬೆಳೆಸಿಕೊಳ್ಳಲು ನೆರವಾಗುವುದು. ಹೀಗೆ ಮಾಡಿದಾಗ, ಸಮಾಜದಲ್ಲಿ **ಸಂಸ್ಕೃತಿ, ಸಮೃದ್ಧಿ** – ಈ ಎರಡೂ ಸ್ಥಿರವಾಗಿ ನೆಲೆಗೊಳ್ಳುತ್ತದೆ. ಮುಖ್ಯವಾಗಿ ಬೇಕಾದದ್ದು ಸಕಾರಾತ್ಮಕ ಮನೋಧರ್ಮ. ಅದನ್ನು ನಾವು ಶಿಕ್ಷಣದ ಮೂಲಕ ಕೊಡುವಂತಾಗಬೇಕು.

ನಮ್ಮ ವಿಶ್ವವಿದ್ಯಾನಿಲಯಗಳ ಶಿಕ್ಷಣ ಕುರಿತು ಸ್ವಾಮೀಜಿಯವರು ಅಂದಿನ ಕಾಲದಲ್ಲಿಯೇ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎನ್ನುವುದು ಸೋಜಿಗದ ಸಂಗತಿ. "ನಿಮ್ಮ ವಿಶ್ವವಿದ್ಯಾನಿಲಯಗಳನ್ನೇ ತೆಗೆದುಕೊಳ್ಳಿ, ಇವು ಕೇವಲ ಪರೀಕ್ಷೆ ನಡೆಸುವ ಸಂಸ್ಥೆಗಳಾಗಿವೆ. ಸ್ವಂತ ವಿಚಾರಶಕ್ತಿಯುಳ್ಳ ಒಬ್ಬ ವ್ಯಕ್ತಿಯೂ ನಿಮ್ಮ ವಿಶ್ವವಿದ್ಯಾನಿಲಯದಿಂದ ಹುಟ್ಟಿಬಂದಿಲ್ಲ" ಎಂದು ಅವರು ಕಟುವಾಗಿ ಟೀಕಿಸುತ್ತಾರೆ. ಅಂದಿನ ಬ್ರಿಟಿಷರ ಭಾರತದಲ್ಲಿ ವೈಸ್‌ರಾಯ್ ಲಾರ್ಡ್ ಕರ್ಜನ್ ವಿಶ್ವವಿದ್ಯಾನಿಲಯದ ಶಿಕ್ಷಣದ ವೆಚ್ಚವನ್ನು ಹೆಚ್ಚಿಸಿದನಂತೆ. ಸ್ವಾಮೀಜಿಯವರು "ಇದು ಒಳ್ಳೆಯದೇ ಆಯಿತು" ಎನ್ನುತ್ತಾರೆ. ಏಕೆಂದರೆ ಈ ವಿಶ್ವವಿದ್ಯಾನಿಲಯಗಳಿಗೆ ಪ್ರವೇಶ ಪಡೆದು, ಕಳಪೆ ಮಟ್ಟದ ವಿದ್ಯೆ ಪಡೆಯುವುದಕ್ಕಿಂತ ಜನರು ವಿಶ್ವವಿದ್ಯಾನಿಲಯಗಳಿಂದ ದೂರವೇ ಉಳಿದರೆ ಒಳಿತು ಎಂಬ ಅಭಿಪ್ರಾಯ ಅವರದು. ಈ ವಿಷಯದಲ್ಲಿ ಮುಂದುವರೆದು ಅವರು ಹೀಗೆ ಹೇಳುವರು: "ಈ ಉನ್ನತ ಶಿಕ್ಷಣ ಉಳಿದರೆಷ್ಟು, ಬಿಟ್ಟರೆಷ್ಟು. ನಮ್ಮ ಜನಗಳಿಗೆ ಅಲ್ಪಸ್ವಲ್ಪ ತಾಂತ್ರಿಕ ಶಿಕ್ಷಣ ದೊರೆತರೆ ಒಳ್ಳೆಯದು. ಆಗ ಅವರಿಗೆ ಕೆಲಸ ಸಿಕ್ಕಿ ಅನ್ನಸಂಪಾದನೆಯಾದರೂ ಸಾಧ್ಯವಾಗುತ್ತದೆ." ಇಂದಿಗೂ ಕೂಡ ಈ ಮಾತುಗಳು ಎಷ್ಟು ಸತ್ಯ ಎಂಬುದನ್ನು ನಾವು ಗಮನಿಸಬೇಕು.

ಅರ್ಥವಿಲ್ಲದ ವಿಶ್ವವಿದ್ಯಾನಿಲಯಗಳ ಪದವಿಗಳ ಬಗ್ಗೆ ಸ್ವಾಮೀಜಿಯವರಿಗೆ ಒಂದು ಬಗೆಯ ಜುಗುಪ್ಸೆಯೇ ಇತ್ತು. ಅವರು ಹೇಳುತ್ತಾರೆ, "ಅನ್ಯರ ಚಿಂತನೆಗಳನ್ನು ವಿದೇಶಿ ಭಾಷೆಯಲ್ಲಿ ಬಾಯಿಪಾಠ ಮಾಡಿ, ವಿಶ್ವವಿದ್ಯಾನಿಲಯಗಳ ಡಿಗ್ರಿಗಳನ್ನು ಪಡೆದುಕೊಂಡಾಕ್ಷಣ ನೀವು ವಿದ್ಯಾವಂತರಾಗಿಬಿಡುತ್ತೀರಾ? ಶಿಕ್ಷಣ ಎಂದರೆ ಇದೇ ಏನು? ನಿಮ್ಮ ಶಿಕ್ಷಣದ ಉದ್ದೇಶವೇನು? ಗುಮಾಸ್ತ ಅಥವಾ ಲಾಯರ್ ಆಗುವುದೇ ಶಿಕ್ಷಣವೇ? ಹೆಚ್ಚೆಂದರೆ ಒಬ್ಬ ಸಬ್‌ಜಡ್ಜ್ ಆಗುವುದು! ಇದೂ ಒಂದು ಬಗೆಯ ಗುಮಾಸ್ತಗಿರಿಯಲ್ಲದೆ ಮತ್ತೇನು? ಇಂತಹ ಪದವಿಗಳಿಂದ ನಮ್ಮ ದೇಶಕ್ಕಾಗುವ ಉಪಯೋಗವಾದರೂ ಏನು?"

ಸ್ವಾಮೀಜಿಯವರು ಸ್ತ್ರೀಯರ ಶಿಕ್ಷಣ ಕುರಿತಾಗಿಯೂ ಚಿಂತಿಸಿದ್ದಾರೆ. ಪುರುಷಪ್ರಧಾನವಾದ ನಮ್ಮ ಸಮಾಜದ ಗಂಡಸರಿಗೆ ಅವರು ಹೀಗೆ ಹೇಳುತ್ತಾರೆ: "ಸ್ತ್ರೀಯರ ಅಭಿವೃದ್ಧಿ ಕುರಿತು ಮಾತನಾಡಲು ನೀವು ಯಾರು? ಅವರಿಗೆ ವಿದ್ಯಾಭ್ಯಾಸ ಕೊಟ್ಟು ಸುಶಿಕ್ಷಿತರನ್ನಾಗಿ ಮಾಡಿ. ಆಗ ಅವರು ತಮ್ಮ ಅಭಿವೃದ್ಧಿಯನ್ನು ತಾವೇ ಸಾಧಿಸಿಕೊಳ್ಳುತ್ತಾರೆ."

ಹೀಗೆ ಇಡೀ ಸಮಾಜವು ಶಿಕ್ಷಣದ ಮುಖಾಂತರ ಸಾಧಿಸಬಹುದಾದ ಪ್ರಗತಿಯ ಬಗ್ಗೆ ಸ್ವಾಮೀಜಿಯವರು ಒಂದು ದೂರದೃಷ್ಟಿಯನ್ನು ನಮಗೆ ಬಹುಹಿಂದೆಯೇ ಕೊಟ್ಟುಹೋದರು. ಆದರೆ ಇಂದಿನ ಶಿಕ್ಷಣದ ಭೀಕರಚಿತ್ರಣ ನೋಡಿದರೆ ಈ ಗುರಿ ಇನ್ನೂ ದೂರವೇ ಉಳಿದಿರುವುದು ನಮಗೆ ಬಹುಸ್ಪಷ್ಟವಾಗಿ ಕಂಡುಬರುತ್ತದೆ.